ವೈದ್ಯರ ಹತ್ತಿರ ಕರೆದುಕೊಂಡು ಹೋಗಲು ಊರ ಮುಂದಿನ ಈ ಚಿಕ್ಕ ಆಲದ ಗಿಡದ ಕೆಳಗೆ ಬಂದು ಕೂತಿದ್ದಾಗ ಅತಿ ನೋವಿನಿಂದ ಪಕ್ಕದೂರಿಗೆ ಹೋಗದೆ ಅಲ್ಲಿಯೇ ಹೆರಿಗೆ ಮಾಡಿಸಬೇಕಾಯಿತು. ಆವತ್ತೆ ಪರಪ್ಪಜ್ಜನ ರೂಪದಲ್ಲಿ ಜೀವವೊಂದು ಭೂಮಿಗೆ ಬಂದು ಆ ಮರದ ಬೇರಿನೊಂದಿಗೆ ಬೆರೆತು, ಕರುಳು ಬಳ್ಳಿಯ ಸಂಬಂಧದಂತೆ ಬೆಸೆದುಕೊಂಡಿತ್ತು.

ಬಾಲಕ ಪರಪ್ಪ ತಂದೆ ತಾಯಿಯ ನೆರಳಿನಲ್ಲಿ ದೇಶ ಪ್ರೇಮವನ್ನೇ ಹೊತ್ತು ಬೆಳೆಯ ಹತ್ತಿದ. ಕಾನೂನುಭಂಗ ಚಳವಳಿ ವೇಳೆ ಸ್ವಾತಂತ್ರ್ಯ, ಸತ್ಯಾಗ್ರಹ ಏನು ಅನ್ನುವುದು ಗೊತ್ತಿಲ್ಲದ ಸಮಯದಲ್ಲಿ ಊರಿನ ಕೆಲವು ಮುಖಂಡರೊಡನೆ ಕರ್ನಾಟಕದ ಬಾರ್ಡೋಲಿ ಎಂದು ಹೆಸರಾದ ಅಂಕೋಲೆಗೆ ಹೋಗಿ ಚಳವಳಿಗಾರರೊಡನೆ ಉಪ್ಪು ತಯಾರಿಸಿ ಉಪ್ಪಿನ ಸತ್ಯಾಗ್ರಹ ಮಾಡಿದ್ದ ಬಾಲಕ ಪರಪ್ಪ. ಮುಂದೆ ಕಾಲೇಜು ಶಿಕ್ಷಣ ಪಡೆಯುವಾಗ ಊರಿನ ಹಲವು ಯುವಕರೊಂದಿಗೆ ಸತ್ಯಾಗ್ರಹ, ಹರತಾಳ ಮುಂತಾದವುಗಳ ಪೂರ್ವಭಾವಿ ಚರ್ಚೆಯನ್ನು ಯುವಕ ಪರಪ್ಪ ರಾತ್ರಿ ಊರೆಲ್ಲ ಮಲಗಿದಾಗ ಪುಟ್ಟ ಲಾಂದ್ರ ಹಚ್ಚಿಕೊಂಡು ಆ ಮರದ ಕೆಳಗೆ ಕೂತು ಮಾತಾಡುತ್ತಿದ್ದರು. ಅಷ್ಟರಲ್ಲಾಗಲೇ ಬೃಹತ್ತಾಗಿ ಬೆಳೆದ ಮರದ ಕೆಳಗೆ ಕಟ್ಟಿದ ಕಟ್ಟೆಯೇ ಅವರಿಗೆ ಆಶ್ರಯ ತಾಣವಾಗಿತ್ತು.

'ಕ್ವಿಟ್ ಇಂಡಿಯಾ'ದ ಹೊತ್ತಿಗೆ ಇಡೀ ಹಿಂದೂಸ್ಥಾನವೇ ಚಳವಳಿಯಿಂದ ತುಂಬಿತ್ತು. ಆಗ ಪರಪ್ಪ ಮತ್ತವನ ಸ್ನೇಹಿತರು ಸೇರಿ ಆಲದ ಕಟ್ಟೆಯ ಮೇಲೆ ಕೂತು ಚರ್ಚಿಸಿ ಮೂರು ಮೂರು ಜನರಂತೆ ಒಂದು ಗುಂಪು ಮಾಡಿಕೊಂಡು ಸರಕಾರಿ ಆಸ್ತಿಪಾಸ್ತಿಗಳಿಗೆ ಹಾನಿ ಮಾಡುವುದು, ತಾರು ಕಂಬಗಳ ತಂತಿಗಳನ್ನು, ರೈಲು ಕಂಬಿಗಳನ್ನು ದಿನಬಿಡದೆ ಕತ್ತರಿಸಿ ಹಾಕಿದರು. ಒಮ್ಮೆ ರೈಲ್ವೆ ಸ್ಟೇಶನ್‌ನಲ್ಲಿ ಹಾನಿ ಮಾಡುತ್ತಿದ್ದಾಗ ನಡುರಾತ್ರಿಯಲ್ಲಿ ಪರಪ್ಪನ ಬಂಧನವಾಗಿ ಆರು ತಿಂಗಳು ಕೈದು, 300 ರೂಪಾಯಿ ದಂಡ, ದಂಡ ತಪ್ಪಿದರೆ ಮತ್ತೆ ಮೂರು ತಿಂಗಳ ಶಿಕ್ಷೆಯನ್ನು ನೀಡಿದರು. ಬಂಧನದ ವೇಳೆ ಜೈಲಿನಲ್ಲಿ ಹೇನು, ಕೂರಿ, ತಗಣಿ ಕಡಿತದಿಂದ ಹಗಲು ರಾತ್ರಿ ನಿದ್ರೆ ಇಲ್ಲದಾಗಿತ್ತು. ಅದರಲ್ಲೂ ಹಡ್ಸನ್‌ನೆಂಬ ಅಧಿಕಾರಿ ಹಳ್ಳಿಗೆ ಬಂದಾಗ ಕಿರುಕುಳ ಕೊಡುತ್ತಿದ್ದ. ಈಗ ಬಂಧನವಾಗಿದ್ದರಿಂದ ಇವರಿದ್ದ ಕೋಣೆಯಲ್ಲಿ ಇಲಿಗಳನ್ನು, ಕೆಲವೊಮ್ಮೆ ಏಡಿಗಳನ್ನು ತಂದು ಬಿಡುತ್ತಿದ್ದ. ಕೆಲವೊಮ್ಮೆ ಹೊರಗಿನಿಂದ ಬಿಸಿ ನೀರನ್ನು ಎರಚುತ್ತಿದ್ದ. ಊಟಕ್ಕಂತೂ ಹಳಸಿದ ಆಹಾರ, ಅದರಲ್ಲೂ ಹುಳುಗಳಿಂದ ಕೂಡಿದ್ದನ್ನು ಕೊಟ್ಟು ತುಂಬಾ ತೊಂದರೆ ಕೊಡುತ್ತಿದ್ದ. ಅಂತಹ ವೇಳೆಯಲ್ಲೂ ಪರಪ್ಪ ತನ್ನನ್ನು ಕಾಣಲು ಬಂದವರನ್ನು ಕೇಳುತ್ತಿದ್ದದ್ದು, "ಆಲದ ಮರ ಹೇಗಿದೆ, ಕಟ್ಟೆ ಹೇಗಿದೆ" ಎಂಬುದನ್ನು ಮಾತ್ರ.

ಶಿಕ್ಷೆ ಮುಗಿಸಿ ಹೊರಬಂದ ಪರಪ್ಪ ಮತ್ತವನ ಸಂಗಡಿಗರು ಜೈಲಿನಲ್ಲಿ ತಮಗೆ ತೊಂದರೆ ಕೊಟ್ಟಿದ್ದ ಹಡ್ಸನ್‌ಗೆ ಬುದ್ಧಿಕಲಿಸಲು ಸಮಯ ಕಾಯುತ್ತಿದ್ದರು. ಅಂತಹ ದಿನವೊಂದು ತಾನಾಗಿಯೇ ಒದಗಿ ಬಂತು. ಹಡ್ಸನ್ ಯಾವುದೋ ಮೊಕದ್ದಮೆ ವಿಚಾರಿಸಲು ರುದ್ರಾಪುರಕ್ಕೆ ಬರುತ್ತಾನೆಂಬ ಸುದ್ದಿ ವಾಲೀಕಾರನಿಂದ ತಿಳಿದುಕೊಂಡ ಅವರು ಊರಿನ ಲಂಡೆನ ಹಳ್ಳದ ಕ್ರಾಸಿಗೆ ದೊಡ್ಡದೊಂದು ತಗ್ಗು ಕಡಿದು, ಅದರ ಮೇಲೆ ಕಣಿಕೆ ಹಾಕಿ, ಮೇಲೆ ತೆಳ್ಳಗೆ ಮಣ್ಣು ಹಾಕಿ ಅವನನ್ನು ಕೊಲ್ಲಲು ಹೊಂಚು ಹಾಕಿ ಕೂತಿದ್ದರು. ಸ್ವಲ್ಪ ಸಮಯದ ನಂತರ ಕುದುರೆಯ ಮೇಲೆ ವೇಗವಾಗಿ ಹಡ್ಸನ್ ಬರುತ್ತಿದ್ದಾಗ ಕಣಿಕೆ ಮೇಲೆ ಕಾಲಿಟ್ಟ ಕುದುರೆ ಕುಸಿದು ತಗ್ಗಿಗೆ ಬಿತ್ತು. ಅದನ್ನೇ ಕಾಯುತ್ತ ಕುಳಿತಿದ್ದ ಮೂವರು ತಗ್ಗಿನ ಸುತ್ತ ನಿಂತು ಕೋಲುಗಳಿಂದ ಹಡ್ಸನ್‌ನನ್ನು ಚೆನ್ನಾಗಿ ಥಳಿಸ ಹತ್ತಿದರು. ಹೊಡೆತ ತಿಂದು ಪ್ರಜ್ಞೆ ತಪ್ಪಿ ಬಿದ್ದಾಗ, ಕುದುರೆಯನ್ನು ಹೇಗೋ ತಗ್ಗಿನಿಂದ ಹೊರತೆಗೆದು, ಹಡ್ಸನ್‌ನನ್ನು ಕತ್ತು ಮಾತ್ರ ಕಾಣುವಂತೆ ಮಣ್ಣಲ್ಲಿ ಮುಚ್ಚಿ ಹೊರಟುಹೋದರು.

ಹಡ್ಸನ್‌ನ ಈ ಪ್ರಕರಣ ಹಿರಿಯ ಅಧಿಕಾರಿಗಳಿಗೆ ಗೊತ್ತಾಗಿ ಆ ಮೂವರನ್ನು ಕಂಡಲ್ಲಿ ಗುಂಡಿಕ್ಕುವ "ಹುಕುಂ"ನೊಂದಿಗೆ ಅವರನ್ನು ಹುಡುಕುತ್ತ ಬಂದ ಪೊಲೀಸ್ ತಂಡವು ಇಡೀ ಊರನ್ನು ಇಡೀ ರಾತ್ರಿ